


# ದೋಣಿ

ಊರಿಗೆ ಹೋಗಲು
ದೋಣಿ ದಾಟಬೇಕಾಗಿತ್ತು

ಆಚೆ ದಡದಲ್ಲಿ ನಿಂತು
ಜಟ್ಟಿ ಯಂಕಪ್ಪನಿಗೆ
'ಕೂ...' ಹಾಕಿ
ಕಾಯಬೇಕಾಗಿತ್ತು

ನಮ್ಮೆದುರು,
ಕೋರಗಣ್ಣಿನಲಿ ನೋಡಿಯೂ
ನೋಡದಂತಿರುವ ಶರಾವತಿ

ಕೊನೆಗೆ,
ನಮ್ಮನ್ನೂ ದೋಣಿಯನ್ನೂ
ಜಟ್ಟಿ ಯಂಕಪ್ಪನನ್ನೂ
ಹೊತ್ತೊಯ್ಯುತಿತ್ತು

ಈಗ, ಟಾರು
ರೋಡಾಗಿದೆ
ಗರಬರ ಗಾಡಿ ಓಡಾಡುತ್ತದೆ

ಆದರೆ,
ಈಗಲೂ
ಕರೆಯುತ್ತದೆ ದೋಣಿ
ಲಂಗರು ಹಾಕಿ.

● **ರಾಜು ಹೆಗಡೆ**
ಕಲೆ: ಡಿ.ಕೆ. ರಮೇಶ್

